# ನೌಕಾಪಡೆ ಜತೆ ಅಮೃತಾ ವಿಶ್ವವಿದ್ಯಾಪೀಠಂ ಒಡಂಬಡಿಕೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ನೌಕಾಪಡೆಯ ಅಧಿಕಾರಿಗಳಿಗೆ ಶೈಕ್ಷಣಿಕ ಮತ್ತು ಸಂಶೋಧನೆಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಅಮೃತಾ ವಿಶ್ವವಿದ್ಯಾಪೀಠಂ ಭಾರತೀಯ ನೌಕಾಪಡೆಯ ಜತೆ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದದಿಂದ ಏರೋಸ್ಪೇಸ್, ಆ್ಯಂಟಿ ಸಬ್‌ಮೆರೈನ್ ವಾರ್‌ಫೇರ್, ಸೈಬರ್ ಸೆಕ್ಯೂರಿಟಿ, ಮ್ಯಾನೇಜ್‌ಮೆಂಟ್ ಮತ್ತು ಮೆಡಿಕಲ್ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡಬಹುದಾಗಿದೆ. ನೌಕಾಪಡೆಯಲ್ಲಿನ ಅಧಿಕಾರಿಗಳಿಗೆ ಎಂ.ಟೆಕ್ ಮತ್ತು ಪಿಎಚ್.ಡಿ ಕಾರ್ಯಕ್ರಮಗಳನ್ನು ನೀಡುವ ಮೂಲಕ ಅವರಲ್ಲಿನ ಸಂಶೋಧನೆ ಮತ್ತು ಅಭಿವೃದ್ಧಿ ಮಟ್ಟವನ್ನು ವೃದ್ಧಿಸಿಕೊಳ್ಳಲು ಸಹಾಯಕವಾಗಲಿದೆ.

ಎವಿಎಸ್‌ಎಂ, ಎನ್‌ಎಂ, ವಿಎಸ್‌ಎಂ, ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್ ಇನ್‌ಚೀಫ್, ಸದರನ್ ನಾವೆಲ್ ಕಮಾಂಡ್(ಎಸ್‌ಎನ್‌ಸಿ) ವೈಸ್ ಅಡ್ಮಿರಲ್ ಅನಿಲ್ ಕುಮಾರ್ ಚಾವ್ಲಾ ಮತ್ತು ಕೊಯಮತ್ತೂರಿನ ಅಮೃತಾ ವಿಶ್ವ ವಿದ್ಯಾಪೀಠಂನ ಕಾರ್ಪೊರೇಟ್ ಅಂಡ್ ಇಂಡಸ್ಟ್ರಿ ರಿಲೇಷನ್ಸ್‌ನ ನಿರ್ದೇಶಕ ಸಿ.ಪರಮೇಶ್ವರನ್ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದರು.



ಅಮೃತಾ ವಿಶ್ವ ವಿದ್ಯಾಪೀಠಂನ ಕಾರ್ಪೊರೇಟ್ ಅಂಡ್ ಇಂಡಸ್ಟ್ರಿ ರಿಲೇಷನ್ಸ್‌ನ ನಿರ್ದೇಶಕ ಸಿ.ಪರಮೇಶ್ವರನ್ ಭಾರತೀಯ ನೌಕಾಸೇನೆಯ ವೈಸ್ ಅಡ್ಮಿರಲ್ ಅನಿಲ್‌ಕುಮಾರ್ ಚಾವ್ಲಾ ಒಪ್ಪಂದ ಪತ್ರವನ್ನು ಪ್ರದರ್ಶಿಸಿದರು.

ಸಹಿ ಹಾಕಿದ ಬಳಿಕ ಕೊಯಮತ್ತೂರಿನ ಅಮೃತಾ ವಿಶ್ವ ವಿದ್ಯಾಪೀಠಂನ ಕಾರ್ಪೊರೇಟ್ ಅಂಡ್ ಇಂಡಸ್ಟ್ರಿ ರಿಲೇಷನ್ಸ್‌ನ ನಿರ್ದೇಶಕ ಸಿ.ಪರಮೇಶ್ವರನ್ ಮಾತನಾಡಿ, ಭಾರತೀಯ ನೌಕಾಪಡೆ ಇದೇ ಮೊದಲ ಬಾರಿಗೆ ಖಾಸಗಿ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಕ್ಷಣ ಒಂದು ಐತಿಹಾಸಿಕ. ನೌಕಾಪಡೆಯ ಅಧಿಕಾರಿಗಳೊಂದಿಗೆ ಸೇರಿ ದೇಶದ ರಕ್ಷಣಾ ಕ್ಷೇತ್ರವನ್ನು ಮತ್ತಷ್ಟು ಶಕ್ತಿಶಾಲಿಯನ್ನಾಗಿಸುವ ನಿಟ್ಟಿನಲ್ಲಿ ಸಂಶೋಧನೆ ಕೈಗೊಳ್ಳಲು ನಮ್ಮ ವಿಜ್ಞಾನಿಗಳು ಮತ್ತು ಸಂಶೋಧಕರು ಉತ್ಸುಕರಾಗಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಭಾರತೀಯ ನೌಕಾಸೇನೆಯ ವೈಸ್ ಅಡ್ಮಿರಲ್ ಅನಿಲ್‌ಕುಮಾರ್ ಚಾವ್ಲಾ ಮಾತನಾಡಿ, ಅಮೃತಾ ವಿಶ್ವ ವಿದ್ಯಾಪೀಠಂ ಮತ್ತು ಭಾರತೀಯ ನೌಕಾಪಡೆಯೊಂದಿಗೆ ಆಗಿರುವ ಈ ಒಪ್ಪಂದವು ಭವಿಷ್ಯದಲ್ಲಿ ಹೊಸ ತಂತ್ರಜ್ಞಾನಗಳ ಅಭಿವೃದ್ಧಿ, ಕಲ್ಪನೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಅಡಿಪಾಯ ಆಗಲಿದೆ. ಹೊಸತಂತ್ರಜ್ಞಾನಗಳ ಅಭಿವೃದ್ಧಿಗೆ ಶೈಕ್ಷಣಿಕ ಮತ್ತು ಸೇನಾಪಡೆಗಳಿಗೆ ಇಂತಹ ಸಹಭಾಗಿತ್ವದ ಅಗತ್ಯವಿದೆ ಎಂದು ತಿಳಿಸಿದರು.

ಈ ವೇಳೆ ಸದರನ್ ನಾವೆಲ್ ಕಮಾಂಡ್‌ನ ಹೆಡ್ ಕ್ವಾರ್ಟರ್ಸ್‌ನ ಚೀಫ್ ಸ್ಟಾಫ್‌ಆಫೀಸರ್ (ತಾಂತ್ರಿಕ) ಇಶಾನ್ ಟಂಡನ್, ಕಮಾಂಡ್ ಎಂಜಿನಿಯರ್ ಸಂಜಯ್ ಚೋಪ್ರಾ, ಐಎನ್‌ಎಚ್‌ಎಸ್ ಸಂಜೀವನಿಯ ಸರ್ಜಿಕಲ್ ಸ್ಪೆಷಲಿಸ್ಟ್ ಕ್ಯಾಪ್ಟನ್ ವೀರೇಂದ್ರ ಸಿಂಗ್ ಮತ್ತಿತರರು ಇದ್ದರು.